# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **114** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **19.12.2022** |
| **ಉತ್ತರಿಸಬೇಕಾದ ಸಚಿವರು** | : | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು** |

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪರವಾನಗಿ ಪಡೆದಿರುವ ಸರ್ಕಾರಿ ಮತ್ತು ಖಾಸಗಿ ಡಯಾಲಿಸಿಸ್ ಕೇಂದ್ರಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಪರವಾನಗಿ ಪಡೆದಿರುವ ಒಟ್ಟು ಡಯಾಲಿಸಿಸ್ ಕೇಂದ್ರಗಳು= 410<br>1. ಸರ್ಕಾರಿ ಡಯಾಲಿಸಿಸ್ ಕೇಂದ್ರಗಳು= 169<br>2. ಖಾಸಗಿ ಡಯಾಲಿಸಿಸ್ ಕೇಂದ್ರಗಳು= 241<br>ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಆ) | ಡಯಾಲಿಸಿಸ್ ದೀರ್ಘ ಮತ್ತು ದುಬಾರಿ ಪ್ರಕ್ರಿಯೆಯಾಗಿದ್ದು, ಡಯಾಲಿಸಿಸ್‌ಗೆ ಒಳಗಾಗುವ ಸಾರ್ವಜನಿಕರಿಗೆ ಹಾಗೂ ಹಿರಿಯ ನಾಗರಿಕರಿಗೆ ಸರ್ಕಾರದಿಂದ ಉಚಿತ ವೈದ್ಯಕೀಯ ವ್ಯವಸ್ಥೆಯನ್ನು ಕಲ್ಪಿಸಲಾಗಿದೆಯೇ; ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಎಷ್ಟು ಜನರು ಇದರ ಪ್ರಯೋಜನ ಪಡೆದಿದ್ದಾರೆ; (ಸಂಪೂರ್ಣ ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ 146 ತಾಲ್ಲೂಕು ಆಸ್ಪತ್ರೆಗಳು ಹಾಗೂ 23 ಜಿಲ್ಲಾ ಆಸ್ಪತ್ರೆಗಳಲ್ಲಿ ಉಚಿತವಾಗಿ ಡಯಾಲಿಸಿಸ್ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ.<br>(1) 2019-20ರಲ್ಲಿ 3,659 ಡಯಾಲಿಸಿಸ್ ರೋಗಿಗಳಿಗೆ ಉಚಿತವಾಗಿ ಡಯಾಲಿಸಿಸ್ ಚಿಕಿತ್ಸೆಯನ್ನು ನೀಡಲಾಗಿದೆ.<br>(2) 2020-21ರಲ್ಲಿ 3,804 ಡಯಾಲಿಸಿಸ್ ರೋಗಿಗಳಿಗೆ ಉಚಿತವಾಗಿ ಡಯಾಲಿಸಿಸ್ ಚಿಕಿತ್ಸೆಯನ್ನು ನೀಡಲಾಗಿದೆ.<br>(3) 2021-22ರಲ್ಲಿ 3,829 ಡಯಾಲಿಸಿಸ್ ರೋಗಿಗಳಿಗೆ ಉಚಿತವಾಗಿ ಡಯಾಲಿಸಿಸ್ ಚಿಕಿತ್ಸೆಯನ್ನು ನೀಡಲಾಗಿದೆ. |
| ಇ) | ದಾವಣಗೆರೆಯಲ್ಲಿ ಹೊಸದಾಗಿ ಡಯಾಲಿಸಿಸ್ ಕೇಂದ್ರಗಳನ್ನು ತೆರೆಯಲು ಸರ್ಕಾರವು ಉದ್ದೇಶಿಸಲಾಗಿದೆಯೇ; ಹಾಗಿದ್ದಲ್ಲಿ, ಮಾಹಿತಿ ಒದಗಿಸುವುದು; | ಹೌದು.<br>ಹೊಸದಾಗಿ ರಚಿಸಲಾದ ತಾಲ್ಲೂಕುಗಳಲ್ಲಿ ದಾವಣಗೆರೆ ಜಿಲ್ಲೆಗೆ ನ್ಯಾಮತಿ ತಾಲ್ಲೂಕಿನಲ್ಲಿ ಎರಡು ಡಯಾಲಿಸಿಸ್ ಯಂತ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. |
| ಈ) | ರಾಜ್ಯದಲ್ಲಿ ಮೂತ್ರಪಿಂಡ ವೈಫಲ್ಯ ತಡೆಗಟ್ಟುವ ಹಾಗೂ ಡಯಾಲಿಸಿಸ್ ಕೇಂದ್ರಗಳಲ್ಲಿ ನಿರ್ವಹಣೆ ಮಾಡುವ ನಿಟ್ಟಿನಲ್ಲಿ ಸರ್ಕಾರದ ಕಾರ್ಯ ಯೋಜನೆಗಳೇನು? | • ರಾಜ್ಯದಲ್ಲಿ ಒಟ್ಟು 30 ಜಿಲ್ಲಾ ಆಸ್ಪತ್ರೆಗಳು, ಎನ್.ಸಿ.ಡಿ ಕ್ಲಿನಿಕ್, 347 ಸಿ.ಹೆಚ್.ಸಿ. ಎನ್.ಸಿ.ಡಿ ಕ್ಲಿನಿಕ್ ಮತ್ತು ಎಲ್ಲಾ ಉಪ ಕೇಂದ್ರಗಳನ್ನು ಆರೋಗ್ಯ ಕ್ಷೇಮ ಕೇಂದ್ರಗಳನ್ನಾಗಿ ಪರಿವರ್ತಿಸಿದ್ದು, ಸಿ.ಹೆಚ್.ಓ ಗಳು ನೇಮಕಗೊಂಡಿರುತ್ತಾರೆ.<br>• 30 ವರ್ಷ ಮೇಲ್ಪಟ್ಟವರಿಗೆ ರಕ್ತದೊತ್ತಡ, ಮಧುಮೇಹ ರೋಗಗಳ ಬಗ್ಗೆ ಪ್ರಾಥಮಿಕ ಹಂತದಲ್ಲೇ ಪರೀಕ್ಷೆಗೆ ಒಳಪಡಿಸಿ, ಚಿಕಿತ್ಸೆ ನೀಡಲಾಗುತ್ತಿದೆ.<br>• ಜನಸಂಖ್ಯೆ ಆಧಾರಿತ ತಪಾಸಣೆ ಕಾರ್ಯಕ್ರಮದಡಿ ಮನೆ-ಮನೆ ಭೇಟಿ ನೀಡಿ ಅಸಾಂಕ್ರಾಮಿಕ ರೋಗಗಳ ಬಗ್ಗೆ ನೊಂದಣಿ ಮತ್ತು ಅರಿವು ಮೂಡಿಸಲಾಗುತ್ತಿದೆ. |

| | | |
|---|---|---|
| | | • ಔಟ್ ರಿಚ್ ಶಿಬಿರಗಳು, ಕರಪತ್ರಗಳು, ಭಿತ್ತಿಪತ್ರಗಳ ಪ್ರದರ್ಶನ, ದೃಶ್ಯ ಮಾಧ್ಯಮಗಳು ಮತ್ತು ಮುದ್ರಣ ಮಾಧ್ಯಮಗಳ ಮುಖಾಂತರ ಅಸಾಂಕ್ರಾಮಿಕ ರೋಗಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br>• ಮೇಲ್ಕಂಡ ಕಾರ್ಯಕ್ರಮಗಳೊಂದಿಗೆ ಪ್ರಧಾನ ಮಂತ್ರಿ ರಾಷ್ಟ್ರೀಯ ಡಯಾಲಿಸಿಸ್ ಕಾರ್ಯಕ್ರಮದಡಿ ರಾಜ್ಯದಲ್ಲಿ 169 ಕೇಂದ್ರಗಳಲ್ಲಿ ಡಯಾಲಿಸಿಸ್ ಯಂತ್ರಗಳು ಕಾರ್ಯನಿರ್ವಹಿಸುತ್ತಿದ್ದು, ಮುಂದಿನ ದಿನಗಳಲ್ಲಿ 235 ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಲು ಕ್ರಮಕೈಗೊಳ್ಳಲು ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದೆ. |

**ಸಂಖ್ಯೆ: ಆಕುಕ 100 ಎಸ್.ಟಿ.ಕ್ಯೂ 2022**

**(ಡಾ|| ಕೆ.ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಅನುಬಂಧ-

## ಜಿಲ್ಲೆಯಲ್ಲಿ ಪರವಾನಗಿ ಪಡೆದಿರುವ ಸರ್ಕಾರಿ ಮತ್ತು ಖಾಸಗಿ ಡಯಾಲಿಸಿಸ್ ಕೇಂದ್ರಗಳ ವಿವರ

| ಕ್ರ.ಸಂ | ಜಿಲ್ಲೆಯ ಹೆಸರು | ಸರ್ಕಾರಿ ಡಯಾಲಿಸಿಸ್ ಕೇಂದ್ರಗಳ ಸಂಖ್ಯೆ | ಖಾಸಗಿ ಡಯಾಲಿಸಿಸ್ ಕೇಂದ್ರಗಳ ಸಂಖ್ಯೆ | ಒಟ್ಟು ಡಯಾಲಿಸಿಸ್ ಕೇಂದ್ರಗಳ ಸಂಖ್ಯೆ |
|---|---|---|---|---|
| 1 | ಬಾಗಲಕೋಟೆ | 6 | 25 | 31 |
| 2 | ಬೆಂಗಳೂರು ನಗರ | 6 | 32 | 38 |
| 3 | ಬೆಂಗಳೂರು ಗ್ರಾಮಾಂತರ | 4 | 1 | 5 |
| 4 | ಬೆಳಗಾವಿ | 9 | 8 | 17 |
| 5 | ಬಳ್ಳಾರಿ | 4 | 2 | 6 |
| 6 | ಬೀದರ್ | 5 | 5 | 10 |
| 7 | ಚಾಮರಾಜನಗರ | 3 | 0 | 3 |
| 8 | ಚಿಕ್ಕಮಗಳೂರು | 6 | 1 | 7 |
| 9 | ಚಿಕ್ಕಬಳ್ಳಾಪುರ | 6 | 0 | 6 |
| 10 | ಚಿತ್ರದುರ್ಗ | 6 | 3 | 9 |
| 11 | ದಕ್ಷಿಣ ಕನ್ನಡ | 5 | 25 | 30 |
| 12 | ದಾವಣಗೆರೆ | 5 | 6 | 11 |
| 13 | ಧಾರವಾಡ | 4 | 10 | 14 |
| 14 | ಗದಗ | 6 | 5 | 11 |
| 15 | ಹಾಸನ | 7 | 7 | 14 |
| 16 | ಹಾವೇರಿ | 6 | 10 | 16 |
| 17 | ಕಲಬುರಗಿ | 7 | 7 | 14 |
| 18 | ಕೊಡಗು | 3 | 1 | 4 |
| 19 | ಕೋಲಾರ | 5 | 2 | 7 |
| 20 | ಕೊಪ್ಪಳ | 3 | 0 | 3 |
| 21 | ಮಂಡ್ಯ | 6 | 5 | 11 |
| 22 | ಮೈಸೂರು | 6 | 21 | 27 |
| 23 | ರಾಯಚೂರು | 6 | 10 | 16 |
| 24 | ರಾಮನಗರ | 4 | 3 | 7 |
| 25 | ಶಿವಮೊಗ್ಗ | 6 | 10 | 16 |
| 26 | ತುಮಕೂರು | 9 | 9 | 18 |
| 27 | ಉಡುಪಿ | 3 | 10 | 13 |
| 28 | ಉತ್ತರ ಕನ್ನಡ | 10 | 7 | 17 |
| 29 | ವಿಜಯಪುರ | 5 | 14 | 19 |
| 30 | ವಿಜಯನಗರ | 5 | 1 | 6 |
| 31 | ಯಾದಗಿರಿ | 3 | 1 | 4 |
| | **ಒಟ್ಟು** | **169** | **241** | **410** |